ಕರ್ನಾಟಕ ಸರಕಾರ

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ
ದಂಡಾಧಿಕಾರಿಯವರ ಕಾರ್ಯಾಲಯ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು – 575001.

Deputy Commissioner &
District Magistrate's Office,
Dakshina Kannada,
Mangaluru-575001.

ಟ್ಯಾಕ್ಸ್/16011/ಸಿಆರ್ 1/E-86482/2020/ /ಡಿ3

ದಿನಾಂಕ: 29-10-2020

ತಹಶೀಲ್ದಾರರು
ಬಂಟ್ವಾಳ, ದ.ಕ.
–ಇವರಿಗೆ

ಮಾನ್ಯರೇ,

ವಿಷಯ: ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 2016 ರ ಕಲಂ 40(1) ನಿಯಮ 25 ರಡಿ ದಂಡ/ಪರಿಹಾರದ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವ ಬಗ್ಗೆ.

ಉಲ್ಲೇಖ:1) ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇವರ ಅ.ಸ. ಪತ್ರ ಸಂ: ರೇರಾ/ಕಂದಾಯ/ಸಿಆರ್/20/2019-20/1787, ದಿನಾಂಕ: 11-12-2019
2) ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:31-01-2020
3) ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇವರ ಅ.ಸ. ಪತ್ರ ಸಂ:ಕ/ರೇರಾ/ರೆವಿನ್ಯೂ/ಸಿಆರ್/20/2019-20/3518, ದಿನಾಂಕ: 22-09-2020

-::-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **Mrs V.P.Lobo M/s T3 Urban Developers Ltd.,** ಇವರಿಂದ ಬರಬೇಕಾದ ಬಾಕಿ ಮೊತ್ತ ರೂ. 8,15,850/- ವನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ ಅಡಿಯಲ್ಲಿ ಭೂ ಕಂದಾಯ ಮತ್ತು ಸರ್ಕಾರಿ ಇತರೆ ದಂಡದ ಬಾಕಿಗಳನ್ನು ವಸೂಲು ಮಾಡಲು ಅನುಸರಿಸಿರುವ ಎಲ್ಲಾ ಕಾರ್ಯ ವಿಧಾನಗಳ ಅನುಸರಿಸಿ ಸದರಿ ಅಭಿವೃದ್ಧಿದಾರರ ಯೋಜನೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಚರ-ಸ್ಥಿರಾಸ್ತಿಗಳನ್ನು ಪತ್ತೆ ಹಚ್ಚಿ ನಿಯಮಾನುಸಾರ ಕ್ರಮ ಜರುಗಿಸಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇವರು ನಿರ್ದೇಶಿಸಿರುವ ಪ್ರಯುಕ್ತ ಸದರಿ ಪ್ರಕರಣದ ಕುರಿತು ಕೂಲಂಕಷವಾಗಿ ಪರಿಶೀಲಿಸಿ ತಮ್ಮ ವ್ಯಾಪ್ತಿಯೊಳಗೆ ಬಾಕಿದಾರರು ಚರ-ಸ್ಥಿರಾಸ್ತಿಗಳನ್ನು ಹೊಂದಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಸೆಕ್ಷನ್ 190 ರಂತೆ ಭೂ ಕಂದಾಯ ಬಾಕಿಯ ಪ್ರಕಾರ ಸಂಬಂಧಪಟ್ಟವರಿಂದ ನಿಯಮಾನುಸಾರ ವಸೂಲಿ ಮಾಡುವ ಬಗ್ಗೆ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ವಸೂಲಾತಿ ದೃಢಪತ್ರವನ್ನು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಹಶೀಲ್ದಾರ್ ಗಳಿಗೆ ಉಲ್ಲೇಖ(2)ರಂತೆ ಈಗಾಗಲೇ ಸೂಚಿಸಲಾಗಿರುತ್ತದೆ.

ಉಲ್ಲೇಖ(3)ರ ಪತ್ರದ ಅಡಕದಲ್ಲಿ ಬಾಕಿದಾರರ ವಿಳಾಸವನ್ನು ತಿಳಿಸಲಾಗಿದ್ದು, ಅದರಂತೆ ರೇರಾ ಕಾಯ್ದೆ ಕಲಂ 40(1) ನಿಯಮ 25 ಹಾಗೂ ಭೂ ಕಂದಾಯ ಬಾಕಿ ಯೋಜನೆಯ ವಸೂಲಾತಿ ಪ್ರಕ್ರಿಯೆಯನ್ವಯ ಕ್ರಮ ಕೈಗೊಂಡು ಡೆವಲಪರ್ಸ್ ಲಿ., ಟಿ3 ಗ್ರೀನ್ ಸಿಟಿ, ಲಿಲ್ಲಿ ವಾಮದಪದವು, ಬಂಟ್ವಾಳ ಇವರಿಂದ ಯೋಜನೆಯ ಮೊತ್ತ ರೂ. 8,15,850/- ಗಳನ್ನು ಭೂ ಕಂದಾಯ ಬಾಕಿ ಎಂದು ವಸೂಲು ಮಾಡಲು ಜರೂರಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ತಮ್ಮ ವಿಶ್ವಾಸಿ,
ಜಿಲ್ಲಾಧಿಕಾರಿಯವರ ಪರವಾಗಿ
ದಕ್ಷಿಣ ಕನ್ನಡ ಜಿಲ್ಲೆ,ಮಂಗಳೂರು
29/10/2020

ಪ್ರತಿ:–1) ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ.1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯೂನಿಟಿ ಬಿಲ್ಡಿಂಗ್ ಹಿಂಭಾಗ, ಸಿ.ಎಸ್.ಐ. ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು -560 027 ಇವರಿಗೆ ಮಾಹಿತಿಗಾಗಿ
2) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರಿಗೆ ಮಾಹಿತಿಗಾಗಿ.

Website: www.dk.nic.in Phone: 0824-2220588 Fax: 0824-2441564 Email: dc.mnglr@gmail.com